

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನಿನ **'ಮಜ್ಲಿಸ್ ಅನ್‌ಸಾರುಲ್ಲಾಹ್ ಇಜ್ತಿಮಗಾಹ್'** ನಿಂದ 13-09-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَ اَشْهَدُ اَنَّ مُحَمَّدًا عَبْدُهٗ وَرَسُوْلُهٗ۔ اَمَّا بَعْدُ

فَاَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ ۙ الرَّحْمٰنِ الرَّحِيْمِ ۙ مٰلِكِ يَوْمِ الدِّيْنِ ۙ اِيَّاكَ نَعْبُدُ وَ اِيَّاكَ نَسْتَعِيْنُ ۙ

اِهْدِنَا الصِّرَاطَ الْمُسْتَقِيْمَ ۙ صِرَاطَ الَّذِيْنَ اَنْعَمْتَ عَلَيْهِمْ ۙ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۙ

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಬದರಿ ಸಹಾಬರ ಬಗ್ಗೆ ವಿವರಣೆಯನ್ನು ಇಂದು ಸಹ ಮುಂದುವರಿಸಲಿರುವೆನು. ಆದರೆ ಅದರ ಮೊದಲು ಯು.ಕೆ. ಅನ್‌ಸಾರುಲ್ಲಾಹ್ ಇಜ್ತಿಮಾ ಸಂಬಂಧಿಸಿ ಅನ್‌ಸಾರ್‌ಗಳೊಡನೆ ಹೇಳಬಯಸುತ್ತೇನೆ– ಅನ್‌ಸಾರ್‌ಗಳೂ ಮುಹಾಜಿರುಗಳೂ ಆಗಿದ್ದ ಆ ಸಹಾಬರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದಾಗ ತಮ್ಮೊಳಗೆ ಪರಿಶುದ್ಧ ಬದಲಾವಣೆಗಳನ್ನು ಸೃಷ್ಟಿಸಿದರು. ಅವರು ತಖ್ವದ, ಬಲಿದಾನದ, ಪ್ರಾಮಾಣಿಕತೆ ಮತ್ತು ನಿಷ್ಠೆಯ ಉನ್ನತ ಮಟ್ಟದ ವಿಸ್ಮಯಕರವಾದ ಉದಾಹರಣೆಗಳನ್ನು ತೋರಿಸಿದರು. ಈಗ ಈ ಇಜ್ತಿಮಾದಲ್ಲಿ ಹಾಜರಿರುವ ನೀವು ಅನ್‌ಸಾರ್‌ಗಳೂ ಮುಹಾಜಿರ್‌ಗಳೂ ಆಗಿರುವಿರಿ. ಆದುದರಿಂದ ನೀವು ನಿಮ್ಮನ್ನು ಪರಿಶೋಧಿಸುತ್ತಾ ಇರಬೇಕು – ನಮ್ಮ ಮುಂದೆ ಇರಿಸಲಾದ ಉದಾಹರಣೆಗಳಿಗೆ ಅನುಸಾರವಾಗಿ ನಾವು ಎಷ್ಟರ ಮಟ್ಟಿಗೆ ಅನುಸರಿಸುವವರೂ ಕರ್ಮನಿಷ್ಠರೂ ಆಗಿರುವೆವು ಎಂದು.

ಇಂದು ನಾನು ಪ್ರಸ್ತಾಪಿಸಲಿರುವ ಮೊದಲನೆಯ ಬದರಿ ಸಹಾಬಿಯ ಹೆಸರು ಹಝ್ರತ್ ನುಅ್‌ಮಾನ್ ಬಿನ್ ಅಮರ್(ರ). ಅವರ ಹೆಸರು ನುಅ್‌ಮಾನ್ ಎಂದೂ ನಈಮಾನ್ ಎಂದೂ ಉಲ್ಲೇಖಿತವಾಗಿವೆ. ಅವರು ಬೈಅತೆ ಅಖಬ ಸಾನಿಯದಲ್ಲಿ ಎಪ್ಪತ್ತು ಅನ್‌ಸಾರ್‌ಗಳೊಂದಿಗೆ ಸೇರಿದ್ದರು. ಅವರು ಬದರ್, ಉಹುದ್, ಖಂದಕ್ ಮೊದಲಾದ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದರು. ಒಂದು ವರದಿ ಹೀಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಈಮಾನ್ ಬಗ್ಗೆ ಒಳ್ಳೆಯ ಮಾತು ಹೊರತು ಬೇರೆ ಏನನ್ನೂ ಹೇಳಬೇಡಿರಿ. ಯಾಕೆಂದರೆ ಅವರು ಅಲ್ಲಾಹನನ್ನೂ ಅವನ ರಸೂಲರನ್ನೂ ಪ್ರೀತಿಸುವವರಾಗಿದ್ದಾರೆ. ಹಝ್ರತ್ ನಈಮಾನ್ ಹಿಜರಿ 60ರಲ್ಲಿ ಹಝ್ರತ್ ಅಮೀರ್ ಮುಆವಿಯರವರ ಆಡಳಿತ ಕಾಲದಲ್ಲಿ ನಿಧನ ಹೊಂದಿದರು.

ಹಝ್ರತ್ ನಈಮಾನ್ ಬಗ್ಗೆ ಹೀಗೆ ಸಹ ವರದಿಯಾಗಿದೆ: ಅವರು ತಮಾಷೆಗೋಸ್ಕರ ಪೀಕಲಾಟ ಮಾಡುವ ಸ್ವಭಾವಗುಣ ಹೊಂದಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಮಾತುಗಳನ್ನು ಆಲಿಸಿ ನಗುತ್ತಿದ್ದರು. ರಬೀಅ ಬಿನ್ ಉಸ್ಮಾನ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಒಬ್ಬ ಗ್ರಾಮೀಣ ಅರಬಿ ಬಂದರು. ಅವರು ತನ್ನ ಒಂಟೆಯನ್ನು ಅಂಗಳದಲ್ಲಿ ಕುಳ್ಳಿರಿಸಿ ಮಸ್‌ಜಿದ್‌ನೊಳಗೆ ಹೋದರು. ಆಗ ಕೆಲವು ಸಹಾಬರು ಹಝ್ರತ್ ನುಅ್‌ಮಾನ್‌ರೊಂದಿಗೆ ಹೇಳಿದರು: ನೀನು ಈ ಒಂಟೆಯನ್ನು ವಧಿಸಿದರೆ ನಾವು ಅದರ ಮಾಂಸ ತಿನ್ನುವೆವು. ನಮಗೆ ಮಾಂಸ ತಿನ್ನುವ ಆಸೆ ಬಹಳ ಇದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅದರ ಬಗ್ಗೆ ದೂರಿತ್ತರೆ ಅವರು ಅದಕ್ಕೆ ಪರಿಹಾರ ನೀಡುವರು. ವರದಿಗಾರ ಹೇಳುತ್ತಾರೆ: ಹಝ್ರತ್ ನುಅ್‌ಮಾನ್ ಅವರ ಮಾತುಗಳನ್ನು ಅಂಗೀಕರಿಸಿ ಒಂಟೆಯನ್ನು ವಧಿಸಿದರು. ಗ್ರಾಮೀಣ ಅರಬಿ ಮಸ್‌ಜಿದ್‌ನಿಂದ ಹೊರಗೆ ಬಂದಾಗ ತನ್ನ ಒಂಟೆಯ ಸ್ಥಿತಿಯನ್ನು ಕಂಡು ಬೊಬ್ಬಿಟ್ಟನು. ಓ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನ್ನ ಒಂಟೆ ವಧಿಸಲ್ಪಟ್ಟಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೊರಗೆ ಬಂದು ಕೇಳಿದರು: ಹೀಗೆ ಮಾಡಿದುದು ಯಾರು? ಜನರು ಹೇಳಿದರು: ನುಅ್‌ಮಾನ್ ಹಾಗೆ ಮಾಡಿದರು ಎಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ನುಅ್‌ಮಾನ್‌ರನ್ನು ಹುಡುಕಲು ಹೊರಟರು. ಏಕೆಂದರೆ ಹಝ್ರತ್ ನುಅ್‌ಮಾನ್ ಅಲ್ಲಿಂದ ಹೋಗಿ ಅಡಗಿ ಕುಳಿತಿದ್ದರು. ಅವರು ಹಝ್ರತ್ ಝುಬಾಬ್ ಬಿನ್ತ್ ಝುಬೈರ್ ಬಿನ್ ಅಬ್ದುಲ್ ಮುತ್ತಲಿಬರ ಬಳಿ ಅಡಗಿ ಕುಳಿತಿರುವುದಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಂಡರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನೀನು ಈ ರೀತಿ ಏಕೆ ಮಾಡಿದೆ? ಹಝ್ರತ್ ನುಅ್‌ಮಾನ್ ಹೇಳಿದರು: ನನ್ನ ಬಗ್ಗೆ ತಮಗೆ ತಿಳಿಸಿದವರೇ ನನ್ನನ್ನು ಉತ್ತೇಜಿಸಿ ಒಂಟೆಯನ್ನು ವಧಿಸುವಂತೆ ಮಾಡಿದರು. ಅದಕ್ಕೆ ಪರಿಹಾರ ಧನವನ್ನು ತಾವು ನೀಡುವಿರೆಂದು ಅವರು ಹೇಳಿದ್ದರು. ಈ ಮಾತುಗಳನ್ನು ಕೇಳಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ನುಅ್‌ಮಾನರ ಮುಖವನ್ನು ಸ್ಪರ್ಶಿಸಿ ಮಂದಹಾಸ ಬೀರಿದರು. ಅವರು ಆ ಗ್ರಾಮೀಣ ಅರಬಿಗೆ ಒಂಟೆಯ ಬೆಲೆಯಷ್ಟು ಹಣ ನೀಡಿದರು.

ಝುಬೈರ್ ಬಿನ್ ಬಕಾರ್ ತನ್ನ "ಅಲ್ ಫುಖಹಾ ವಲ್ ಮಝಾಹಿಬ್" ಎಂಬ ಗ್ರಂಥದಲ್ಲಿ ಹಝ್ರತ್ ನುಅ್‌ಮಾನ್‌ಗೆ ಸಂಬಂಧಿಸಿದ ಒಂದು ಘಟನೆ ಹೀಗೆ ವಿವರಿಸಿದ್ದಾರೆ: ಮದೀನವನ್ನು ಯಾರಾದರೂ ತಿರುಗು ವ್ಯಾಪಾರಿ ಪ್ರವೇಶಿಸಿದರೆ ಹಝ್ರತ್ ನುಅ್‌ಮಾನ್ ಅವರಿಂದ ಏನಾದರೂ ಖರೀದಿಸಿ ಅದನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪಾರಿತೋಷಿಕವಾಗಿ ನೀಡುತ್ತಿದ್ದರು. ಆ ವ್ಯಾಪಾರಿ ಆ ವಸ್ತುವಿನ ಹಣವನ್ನು ಕೇಳಿದರೆ ಹಝ್ರತ್ ನುಅ್‌ಮಾನ್

ಅವನನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಕರೆದುಕೊಂಡು ಬಂದು, ಅವನಿಗೆ ನಾನು ನಿಮಗೆ ಕೊಟ್ಟ ವಸ್ತುವಿನ ಹಣ ನೀಡಿರಿ ಎಂದು ಹೇಳುತ್ತಿದ್ದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳುತ್ತಿದ್ದರು: ನೀನು ಈ ವಸ್ತುವನ್ನು ನನಗೆ ಪಾರಿತೋಷಿಕವಾಗಿ ಕೊಟ್ಟಿರಲಿಲ್ಲವೇ? ಆಗ ಹಝ್ರತ್ ನುಅ್‌ಮಾನ್ ಹೇಳುತ್ತಿದ್ದರು: ಅಲ್ಲಾಹನ ಸಂದೇಶವಾಹಕರೇ, ಅಲ್ಲಾಹನಾಣೆ ಆ ವಸ್ತುವನ್ನು ಖರೀದಿಸಲು ನನ್ನಲ್ಲಿ ಹಣವಿರಲಿಲ್ಲ. ಆದರೆ ನನ್ನ ಇಚ್ಛೆ ಏನಿತ್ತೆಂದರೆ ಅದು ತಿನ್ನುವ ವಸ್ತುವಾಗಿದ್ದರೆ ತಾವು ಅದನ್ನು ತಿನ್ನಬೇಕು. ತೆಗೆದು ಇಟ್ಟುಕೊಳ್ಳುವ ವಸ್ತುವಾಗಿದ್ದರೆ ತಾವು ಅದನ್ನು ಇಟ್ಟುಕೊಳ್ಳಬೇಕು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಗುಳು ನಗೆ ಪ್ರಕಟಿಸಿ ಆ ವಸ್ತುವಿನ ಹಣವನ್ನು ಅದರ ಮಾಲಿಕನಿಗೆ ಕೊಡಲು ಆಜ್ಞಾಪಿಸುತ್ತಿದ್ದರು. ವಿಸ್ಮಯಕರವಾದ ಪ್ರೀತಿ ಮತ್ತು ತಮಾಷೆಯ ಸಭೆಗಳು ಅಲ್ಲಿ ಜರಗುತ್ತಿದ್ದುವು. ಅವು ಕೇವಲ ಶುಷ್ಕ ಸಭೆಗಳಾಗಿರಲಿಲ್ಲ.

ನಾನು ಪ್ರಸ್ತಾಪಿಸುವ ಎರಡನೆಯ ಸಹಾಬಿಯ ಹೆಸರು ಹಝ್ರತ್ ಖುಬೈಬ್ ಬಿನ್ ಅಸಾಫ್(ರ). ಅವರು ಅನ್‌ಸಾರ್‌ಗಳ ಖಝ್ರಜ್ ಗೋತ್ರದ ಬನೂ ಜಶಮ್ ಶಾಖೆಗೆ ಸೇರಿದವರಾಗಿದ್ದರು. ಹಝ್ರತ್ ಅಬೂಬಕರ್ ಸಿದ್ದೀಖ್(ರ) ನಿಧನ ಹೊಂದಿದಾಗ ಅವರ ವಿಧವೆ ಖುಬೈಬ ಬಿನ್ತ್ ಖಾರಿಜರನ್ನು ಹಝ್ರತ್ ಖುಬೈಬ್ ವಿವಾಹವಾದರು. ಮದೀನಕ್ಕೆ ಮುಸ್ಲಿಮರು ಹಿಜ್‌ರತ್ ಮಾಡಿದ ಕಾಲದಲ್ಲಿ ಹಝ್ರತ್ ಖುಬೈಬ್ ಮುಸ್ಲಿಮರಾಗಿರಲಿಲ್ಲವಾದರೂ ಮುಹಾಜಿರ್ ಮುಸ್ಲಿಮರಿಗೆ ಆತಿಥ್ಯ ನೀಡುವ ಭಾಗ್ಯ ಅವರಿಗೆ ಲಭಿಸಿತ್ತು. ಹಝ್ರತ್ ತಲ್‌ಹ ಬಿನ್ ಅಬ್ದುಲ್ಲಾ ಮತ್ತು ಹಝ್ರತ್ ಸುಹೈಬ್ ಬಿನ್ ಸನಾನ್ ಅವರ ಮನೆಯಲ್ಲಿ ತಂಗಿದ್ದರು. ಒಂದು ವರದಿ ಪ್ರಕಾರ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಮದೀನದ ಕಡೆಗೆ ಹಿಜ್‌ರತ್ ಮಾಡಿದಾಗ ಖುಬಾದಲ್ಲಿ ಸನ್‌ಆ ಎಂಬ ಸ್ಥಳದಲ್ಲಿ ಹಝ್ರತ್ ಖುಬೈಬರ ಮನೆಯಲ್ಲಿ ವಾಸಿಸಿದರು. ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ಖುಬೈಬ್ ಭಾಗವಹಿಸಿದ್ದರು. ಒಂದು ವರದಿ ಹೀಗಿದೆ: ಹಝ್ರತ್ ಖುಬೈಬ್ ಮದೀನದಲ್ಲಿ ವಾಸಿಸುತ್ತಿದ್ದರು. ಅವರು ಪ್ರಾರಂಭದಲ್ಲಿ ಮುಸ್ಲಿಮರಾಗಿರಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದರ್ ಯುದ್ಧಕ್ಕೆ ಹೊರಟಾಗ ಮಾರ್ಗ ಮಧ್ಯೆ ಹಝ್ರತ್ ಖುಬೈಬ್ ಅವರನ್ನು ಭೇಟಿಯಾಗಿ ಇಸ್ಲಾಂ ಧರ್ಮ ಸ್ವೀಕರಿಸಿದರು.

ಸಹೀಹ್ ಮುಸ್ಲಿಮ್ ಹದೀಸ್ ಗ್ರಂಥದಲ್ಲಿ ಹಝ್ರತ್ ಖುಬೈಬ್ ಮುಸ್ಲಿಮರಾದ ಬಗ್ಗೆ ಹೀಗೆ ಬರೆದಿದೆ: ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದರ್ ಕಡೆಗೆ ಪ್ರಯಾಣ ಮಾಡುತ್ತಾ ಹಿರತುಲ್ ಗಬ್‌ರ ಎಂಬ ಸ್ಥಳಕ್ಕೆ ತಲಪಿದರು. ಅದು ಮದೀನದಿಂದ ಮೂರು ಮೈಲು ದೂರದಲ್ಲಿತ್ತು. ಅಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಒಬ್ಬನು ಭೇಟಿಯಾದನು. ಅವನ ಧೈರ್ಯ ಮತ್ತು ಶೌರ್ಯ ಪ್ರಸಿದ್ಧವಾಗಿದ್ದುವು. ಅವನನ್ನು ಕಂಡು ಸಹಾಬರು ಬಹಳ ಸಂತೋಷಗೊಂಡರು. ಆ ವ್ಯಕ್ತಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದನು– ನಾನು ನಿಮ್ಮೊಂದಿಗೆ ಸೇರಲು ಮತ್ತು ಯುದ್ಧದಲ್ಲಿ ಗಳಿಸುವ ಸಂಪತ್ತಿನಲ್ಲಿ ಪಾಲು ಪಡೆಯಲು ಆಗಮಿಸಿದ್ದೇನೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನೀನು ಅಲ್ಲಾಹನನ್ನು ಮತ್ತು ಅವನ ರಸೂಲರನ್ನು ನಂಬಲು ಸಿದ್ಧನಾಗಿದ್ದೀಯೋ? ಅವನು ಹೇಳಿದನು: ನಾನು ನಂಬಲು ಸಿದ್ಧನಾಗಿಲ್ಲ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನೀನು ಹಿಂತಿರುಗಿ ಹೋಗು. ಏಕೆಂದರೆ ನಾನು ಮುಶ್ರಿಕನಿಂದ ಸಹಾಯ ಪಡೆಯಲು ಇಚ್ಛಿಸುವುದಿಲ್ಲ. ಆಗ ಆ ವ್ಯಕ್ತಿ (ಖುಬೈಬ್) ಅಲ್ಲಿಂದ ಮರಳಿ ಹೋದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದಿಂದ ಆರೇಳು ಮೈಲು ದೂರವಿರುವ ಶಜರ ಎಂಬಲ್ಲಿಗೆ ತಲಪಿದಾಗ ಆ ವ್ಯಕ್ತಿ ಪುನಃ ಬಂದು ಭೇಟಿಯಾದನು. ಹಿಂದಿನ ಸಾರಿ ನಡೆದ ಹಾಗೆ ಮಾತುಕತೆ ನಡೆದುವು. ಅವನು ಮರಳಿ ಹೋದನು. ಅನಂತರ ಪುನಃ ಬೈಝಾ ಎಂಬಲ್ಲಿಗೆ ಬಂದು ಆ ವ್ಯಕ್ತಿ ಭೇಟಿಯಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ನೀನು ಅಲ್ಲಾಹನನ್ನು ಮತ್ತು ಅವನ ರಸೂಲರನ್ನು ನಂಬುವಿಯೋ? ಅವನು ಹೇಳಿದನು: ಹೌದು ನಾನು ನಂಬುತ್ತೇನೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಈಗ ನೀನು ನಮ್ಮೊಂದಿಗೆ ಸೇರಬಹುದು.

ಬದರ್ ಯುದ್ಧದಲ್ಲಿ ಹಝ್ರತ್ ಖುಬೈಬ್ ಮಕ್ಕದ ಖುರೈಶಿಗಳ ನಾಯಕನಾದ ಉಮಯ್ಯ ಬಿನ್ ಖಲ್‌ಫ್‌ನನ್ನು ಹತ್ಯೆ ಮಾಡಿದ್ದರು. ಈ ಘಟನೆ ಬಗ್ಗೆ ಅಲ್ಲಾಮ ನೂರುದ್ದೀನ್ ಹಲ್‌ಬಿ ತನ್ನ ಗ್ರಂಥವಾದ ಸೀರತ್ ಹಲ್‌ಬಿಯ್ಯದಲ್ಲಿ ಹೀಗೆ ಬರೆದಿದ್ದಾರೆ: ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ವರದಿ ಮಾಡುತ್ತಾರೆ: ಬದರ್ ಯುದ್ಧ ಕ್ಷೇತ್ರದಲ್ಲಿ ನಾನು ಉಮಯ್ಯ ಬಿನ್ ಖಲ್‌ಫ್‌ನನ್ನು ಕಂಡೆನು. ಅಜ್ಞಾನ ಕಾಲದಲ್ಲಿ ಅವನು ನನ್ನ ಸ್ನೇಹಿತನಾಗಿದ್ದನು. ಅವನ ಜೊತೆ ಅವನ ಪುತ್ರ ಅಲಿ ಸಹ ಇದ್ದನು. ನನ್ನ ಬಳಿ ಅನೇಕ ಕವಚಗಳಿದ್ದುವು ಅವುಗಳನ್ನು ನಾನು ಧರಿಸಿದ್ದೆನು. ಉಮಯ್ಯ ನನ್ನನ್ನು ಕಂಡಾಗ ಕರೆದು ಹೇಳಿದನು: ನಿನ್ನ ಮೇಲೆ ನನ್ನ ಹಕ್ಕೇನಾದರೂ ಇದ್ದರೆ ನಾನು ನಿನಗೆ ನಿನ್ನ ಆ ಕವಚಗಳಿಗಿಂತ ಉತ್ತಮನಾಗುವೆನು. ನಾನು ಹೇಳಿದೆ ಒಳ್ಳೆಯದು. ನಾನು ನನ್ನ ಕವಚ ಕಳಚಿ ಉಮಯ್ಯ ಮತ್ತು ಅವನ ಪುತ್ರನ ಕೈಗಳನ್ನು ಹಿಡಿದೆನು. ಅವನು ಹೇಳಿದನು: ನನ್ನ ಜೀವಿತ ಕಾಲದಲ್ಲಿ ಇಂತಹ ದುರ್ದಿನ ನಾನು ಕಂಡಿಲ್ಲ. ಅವನು ಕೇಳಿದನು: ತನ್ನ ಕವಚದ ಎದೆ ಭಾಗದಲ್ಲಿ ಉಷ್ಟ್ರ ಪಕ್ಷಿಯ ಗರಿ ತಗಲಿಸಿಟ್ಟಿರುವವನು ಯಾರು? ನಾನು ಹೇಳಿದೆ ಅದು ಹಮ್‌ಝ ಬಿನ್ ಅಬ್ದುಲ್ ಮುತ್ತಲಿಬ್. ಉಮಯ್ಯ ಹೇಳಿದನು: ಅವರ ಕಾರಣದಿಂದಲೇ ನಮ್ಮ ಸ್ಥಿತಿ ಹೀಗಾಗಿದೆ.

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳುತ್ತಾರೆ: ಅನಂತರ ನಾನು ಅವರೊಂದಿಗೆ ನಡೆಯುತ್ತಾ ಇದ್ದಾಗ ಹಝ್ರತ್ ಬಿಲಾಲ್(ರ) ನನ್ನೊಂದಿಗೆ ಉಮಯ್ಯ ಇರುವುದಾಗಿ ಅಚಾನಕವಾಗಿ ನೋಡಿದರು. ಮಕ್ಕದಲ್ಲಿ ಉಮಯ್ಯ ಹಝ್ರತ್

ಬಿಲಾಲರನ್ನು ಇಸ್ಲಾಮಿನಿಂದ ತಿರುಗಿಸಲು ಬಹಳ ಹಿಂಸೆ ನೀಡುತ್ತಾ ಇದ್ದನು. ಹಝ್ರತ್ ಬಿಲಾಲ್ ಉಮಯ್ಯನನ್ನು ನೋಡಿದ ಕೂಡಲೇ ಹೇಳಿದರು: ಕಾಫಿರರ ನಾಯಕ ಉಮಯ್ಯ ಬಿನ್ ಖಲ್ಫ್ ಇಲ್ಲಿದ್ದಾನೆ. ತಿಳಿದುಕೊಳ್ಳಿರಿ ಅವನು ರಕ್ಷಿಸಲ್ಪಟ್ಟರೆ ನನಗೆ ರಕ್ಷೆಯಿಲ್ಲ. ಆಗ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳಿದರು: ನಾನು ಸೆರೆ ಹಿಡಿದವರ ಬಗ್ಗೆ ನೀನು ಈ ರೀತಿ ಹೇಳುತ್ತಿರುವೆಯಾ. ಆಗ ಹಝ್ರತ್ ಬಿಲಾಲ್ ಜೋರಾಗಿ ಹೇಳತೊಡಗಿದರು– ಓ ಅಲ್ಲಾಹನ ಸಹಾಯಕರೇ, ಇವನು ಕಾಫಿರರ ನಾಯಕ ಉಮಯ್ಯಾ ಬಿನ್ ಖಲ್ಫ್ ಆಗಿರುವನು. ಅವನು ರಕ್ಷಿಸಲ್ಪಟ್ಟರೆ ನೀವು ತಿಳಿದುಕೊಳ್ಳಿರಿ ನಾನು ಸುರಕ್ಷಿತನಲ್ಲ. ಈ ರೀತಿ ಪದೇ ಪದೇ ಹೇಳುತ್ತಾ ಇದ್ದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳುತ್ತಾರೆ: ಆಗ ಅನ್ಸಾರಿಗಳು ಓಡಿ ಬಂದು ನಮ್ಮನ್ನು ನಾಲ್ಕು ದಿಕ್ಕುಗಳಿಂದಲೂ ಸುತ್ತುವರಿದರು. ಆಗ ಹಝ್ರತ್ ಬಿಲಾಲ್ ಖಡ್ಗ ಹಿಡಿದು ಉಮಯ್ಯನ ಪುತ್ರನನ್ನು ಆಕ್ರಮಿಸಿದರು. ಆಗ ಅವನು ನೆಲಕ್ಕೆ ಬಿದ್ದನು. ಆಗ ಉಮಯ್ಯ ಭಯ ವಿಹ್ವಲನಾಗಿ ಹೇಗೆ ಬೊಬ್ಬಿಟ್ಟನೆಂದರೆ ಅಂಥಹ ಭಯಾನಕ ಚೀರಾಟ ನಾನು ಎಂದೂ ಕೇಳಿರಲಿಲ್ಲ. ಅನಂತರ ಅನ್ಸಾರಿಗಳು ಅವರಿಬ್ಬರನ್ನು ಖಡ್ಗಗಳಿಂದ ಆಕ್ರಮಿಸಿ ಕೊಂದರು.

ಉಮಯ್ಯನನ್ನು ಅನ್ಸಾರ್ಗಳ ಬನೂ ಮುಅಝಿನ್ ಗೋತ್ರದ ಒಬ್ಬ ವ್ಯಕ್ತಿ ಹತ್ಯೆ ಮಾಡಿದನು. ಇಬ್ನು ಹಿಶಾಮ್ ಹೀಗೆ ಬರೆದಿದ್ದಾರೆ: ಉಮಯ್ಯನನ್ನು ಹಝ್ರತ್ ಮುಆಝ್ ಬಿನ್ ಅಫ್ರಾ ಖಾರಿಜ ಬಿನ್ ಝೈದ್ ಮತ್ತು ಹಝ್ರತ್ ಖುಬೈಬ್ ಬಿನ್ ಅಸಾಫ್ ಜೊತೆ ಸೇರಿ ಕೊಂದರು. ಬೇರೆ ವರದಿಗಳಲ್ಲಿ ಹಝ್ರತ್ ಬಿಲಾಲ್ ಅವನನ್ನು ಹತ್ಯೆ ಮಾಡಿದರೆಂದು ಸಹ ಹೇಳಲಾಗುತ್ತದೆ. ಆದರೆ ವಾಸ್ತವಿಕವಾಗಿ ಎಲ್ಲಾ ಸಹಾಬರು ಅವನ ಹತ್ಯೆಯಲ್ಲಿ ಸಹಭಾಗಿಯಾಗಿದ್ದರು. ಉಮಯ್ಯನ ಪುತ್ರನನ್ನು ಹಝ್ರತ್ ಬಿಲಾಲ್ ಆಕ್ರಮಿಸಿ ನೆಲಕ್ಕೆ ಕೆಡವಿ ಹಾಕಿದ್ದರು. ಅನಂತರ ಹಝ್ರತ್ ಅಮ್ಮಾರ್ ಬಿನ್ ಯಾಸಿರ್ ಅವನನ್ನು ಕೊಂದರು.

ಕೆಲವು ಘಟನೆಗಳನ್ನು ವಿವರಿಸುವಾಗ ಆ ಘಟನೆಯೊಂದಿಗೆ ಈ ಸಹಾಬಿಗೆ ನೇರವಾದ ಸಂಬಂಧ ಇಲ್ಲದಿದ್ದರೂ ಅವರ ಬಗ್ಗೆ ಪ್ರಸ್ತಾಪಗಳಿರುತ್ತವೆ. ಆದುದರಿಂದ ಆ ಪ್ರಸ್ತಾಪಗಳನ್ನು ಸಹ ವಿವರಿಸುವೆನು. ಆ ಮೂಲಕ ನಮಗೆ ಚರಿತ್ರೆಯ ಬಗ್ಗೆ ಸಹ ಸ್ವಲ್ಪ ಮಟ್ಟಿಗೆ ಮಾಹಿತಿ ಲಭಿಸುತ್ತವೆ. ಖುಬೈಬ್ ಬಿನ್ ಅಬ್ದುರ್ರಹ್ಮಾನ್ ವರದಿ ಮಾಡುತ್ತಾರೆ: ನನ್ನ ಪಿತಾಮಹ ಹಝ್ರತ್ ಖುಬೈಬರಿಗೆ ಬದರ್ ಯುದ್ಧದಲ್ಲಿ ಒಂದು ಗಾಯವಾಗಿತ್ತು. ಅವರ ಪಕ್ಕೆಲುಬು ಮುರಿದು ಹೋಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಉಗುಳನ್ನು ಮುರಿದ ಸ್ಥಳದಲ್ಲಿ ಸವರಿ ಗಾಯ ಸರಿಪಡಿಸಿದರು ಮತ್ತು ಹಝ್ರತ್ ಖುಬೈಬ್ ನಡೆದಾಡಲು ತೊಡಗಿದರು. ಇನ್ನೊಂದು ವರದಿ ಹೀಗಿದೆ: ಹಝ್ರತ್ ಖುಬೈಬ್ ಹೇಳಿದರು: ಒಂದು ಯುದ್ಧದಲ್ಲಿ ನನ್ನ ಭುಜದಲ್ಲಿ ಆಳವಾದ ಗಾಯವಾಗಿತ್ತು. ಅದು ನನ್ನ ಬೆನ್ನಿನ ತನಕ ತಲಪಿತ್ತು. ಆ ಕಾರಣದಿಂದ ನನ್ನ ತೋಳು ತೂಗಾಡುತ್ತಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಗಾಯಕ್ಕೆ ತನ್ನ ಉಗುಳು ಸವರಿ ತೋಳನ್ನು ಜೋಡಿಸಿದಾಗ ಅದು ಸರಿಯಾಯಿತು. ನನ್ನ ಗಾಯ ಸಹ ಗುಣ ಹೊಂದಿತು.

ಹಝ್ರತ್ ಖುಬೈಬ್ ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು. ಇನ್ನೊಂದು ವರದಿ ಪ್ರಕಾರ ಅವರು ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು. ಅಲ್ಲಾಹನು ಈ ಎಲ್ಲಾ ಸಹಾಬರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ – ಆಮೀನ್.

ಇನ್ನು ನಾನು ಮೂವರು ಮೃತರ ಬಗ್ಗೆ ವಿವರಿಸುವೆನು. ನಮಾಝ್‌ಗಳ ನಂತರ ಅವರ ನಮಾಝೇ ಜನಾಝ ಸಹ ನಿರ್ವಹಿಸುವೆನು. ಮೃತರಲ್ಲಿ ಮೊದಲನೆಯವರು ಮುಹ್ತರಮ ರಶೀದ ಬೇಗಮ್ ಸಾಹಿಬ (ಮುಕರ್ರಮ್ ಸಯ್ಯಿದ್ ಮುಹಮ್ಮದ್ ಸರ್ವರ್ ಸಾಹಿಬರ ಪತ್ನಿ). ರಬ್ವದಲ್ಲಿ ಆಗಸ್ಟ್ 24ರಂದು 74ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರ ಪಿತಾಮಹ ಮುಕರ್ರಮ್ ಫತ್‌ಹ್ ಮುಹಮ್ಮದ್ ಸಾಹಿಬ್ ಖಾದಿಯಾನಿಗೆ ಹೋಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ ಹಝ್ರತ್ ಖಾಝಿ ಮುಹಮ್ಮದ್ ಅಕ್‌ಬರ್ ಸಾಹಿಬರ ಮೂಲಕ ಬೈಅತ್ ಮಾಡುವ ಭಾಗ್ಯ ಗಳಿಸಿದ್ದರು. ಖಾಝಿ ಸಾಹಿಬರು 1894ರಲ್ಲಿ ಚಂದ್ರಗ್ರಹಣ ಮತ್ತು ಸೂರ್ಯಗ್ರಹಣದ ದೃಷ್ಟಾಂತಗಳನ್ನು ನೋಡಿ ತನ್ನ ಪ್ರದೇಶದ ಮತ್ತು ತನ್ನ ಕುಟುಂಬದ ಜನರೊಂದಿಗೆ ಹೇಳಿದ್ದರು: ಈ ದೃಷ್ಟಾಂತದಿಂದ ತಿಳಿಯುವುದೇನೆಂದರೆ ಇಮಾಮ್ ಮಹ್‌ದಿ ಆಗಮಿಸಿರುವರು ಎಂದು. ಮೃತರ ಒಬ್ಬ ಪುತ್ರ ಮುಹಮ್ಮದ್ ಝಕರಿಯ್ಯಾ ಸಾಹಿಬ್ ಮುಬಲ್ಲಿಗ್ ಲೈಬೀರಿಯಾ ಹೇಳುತ್ತಾರೆ: ನನ್ನ ಮಾತೆ ಚಂದಗಳನ್ನು ಕ್ರಮಬದ್ಧವಾಗಿ ಕೊಡುತ್ತಿದ್ದರು. ತನ್ನ ಚಂದ ಪಾವತಿಯಾಗಿದೆಯೋ ಎಂದು ಬಹಳ ಚಿಂತಿತೆಯಾಗಿರುತ್ತಿದ್ದರು. ಮಕ್ಕಳ ತರಬೇತಿ ಬಗ್ಗೆ ಸಹ ಬಹಳ ಚಿಂತಿಸುತ್ತಿದ್ದರು. ಖಿಲಾಫತ್‌ನೊಂದಿಗೆ ಬಹಳ ಪ್ರೀತಿ ಮತ್ತು ನಿಷ್ಠೆಯ ಸಮಬಂಧವಿತ್ತು. ಅವರು ಬಹಳ ಶ್ರದ್ಧೆಯಿಂದ ಖುತ್‌ಬಗಳನ್ನು ಆಲಿಸುತ್ತಿದ್ದರು. ಖುತ್‌ಬದ ಮುಖ್ಯ ಅಂಶಗಳನ್ನು ಬರೆದಿಡುತ್ತಿದ್ದರು. ಅನಂತರ ತನ್ನ ಮಕ್ಕಳೊಂದಿಗೆ ಚರ್ಚೆ ಮಾಡುತ್ತಿದ್ದರು. ಅಲ್ಲಾಹನು ಅವರ ಮಕ್ಕಳಿಗೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸುವ ಭಾಗ್ಯವನ್ನು ದಯಪಾಲಿಸಲಿ. ಮಕ್ಕಳ ಮಾತೆಯ ಆಧ್ಯಾತ್ಮಿಕ ಪದವಿಗಳನ್ನು ಅಲ್ಲಾಹನು ಉನ್ನತಗೊಳಿಸಲಿ.

ಎರಡನೆಯ ಜನಾಝ ಮುಹ್ತರಮ್ ಮುಹಮ್ಮದ್ ಶಮ್‌ಶೀರ್ ಖಾನ್ ಸಾಹಿಬ್. ಸದರ್ ಜಮಾಅತ್ ನಾಂದಿ ಫಿಜಿಯದಾಗಿದೆ. ಸೆಪ್ಟೆಂಬರ್ ದಿನಾಂಕ 5ರಂದು ಅವರು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. 1962ರಲ್ಲಿ ಅವರು ತಮ್ಮ ತಂದೆಯವರೊಂದಿಗೆ ಲಾಹೋರಿ ಜಮಾಅತನ್ನು ತ್ಯಜಿಸಿ ಬೈಅತ್ ಮಾಡಿದ್ದರು. ಅವರು ಫಿಜಿ ದೇಶದ ಪ್ರಾರಂಭ ಕಾಲದ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ಅವರಿಗೆ ದೀರ್ಘಕಾಲ ಜಮಾಅತ್‌ಗೆ ಸೇವೆ ಸಲ್ಲಿಸುವ ಭಾಗ್ಯ ಲಭಿಸಿತು. ಮಾರೂ, ಸೋವಾ, ನಾಂದಿ ಮತ್ತು ಲಟೂಕಾಗಳಲ್ಲಿ ಮಸ್‌ಜಿದ್‌ಗಳನ್ನು ನಿರ್ಮಿಸುವುದರಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. 2010ರಿಂದ ನಿಧನ ಹೊಂದುವ ತನಕ ಅವರು ನಾಂದಿಯ ಸದರ್ ಜಮಾಅತ್ ಆಗಿ ಸೇವೆ ಸಲ್ಲಿಸುವ ಭಾಗ್ಯ ಗಳಿಸಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು

ರಹಮ್‌ನೊಂದಿಗೆ ವರ್ತಿಸುವವನಾಗಲಿ. ಅವರ ಮಕ್ಕಳು ಅವರ ಒಳಿತುಗಳನ್ನು ಜಾರಿಗೊಳಿಸುವವರಾಗಲಿ.

ಮೂರನೆಯ ಜನಾಝ ಮುಕರ್‍ರಮ ಫಾತಿಮ ಮುಹಮ್ಮದ್ ಮುಸ್ತಫಾ ಸಾಹಿಬರದು. ಅವರು ಕುರ್ದಿಸ್ಥಾನದವರಾಗಿದ್ದು ಈಗ ನಾರ್ವೇ ನಿವಾಸಿಯಾಗಿದ್ದರು. ಅವರು ಜೂನ್ ದಿನಾಂಕ 13ರಂದು 88ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** 2014ರಲ್ಲಿ ಅವರು ಬೈಅತ್ ಮಾಡುವ ಭಾಗ್ಯ ಗಳಿಸಿದರು. ಅವರ ಪುತ್ರಿ ಹೇಳುತ್ತಾರೆ: ನನ್ನ ತಾಯಿ ಓದು ಬರಹ ಕಲಿತಿರಲಿಲ್ಲವಾದರೂ ಪವಿತ್ರ ಖುರ್‌ಆನಿನ ಅನೇಕ ವಚನಗಳನ್ನೂ ಅನೇಕ ಹದೀಸುಗಳನ್ನೂ ಬಾಯಿಪಾಠ ಮಾಡಿದ್ದರು. ಅವರ ಮುಖ್ಯ ಕರ್ಮ ನಮಾಝ್‌ಗಳನ್ನು ನಿಗದಿತ ಸಮಯದಲ್ಲಿಯೇ ಅನುಷ್ಠಿಸುವುದಾಗಿತ್ತು. ಅವರು ಬಹಳ ಹೆಚ್ಚು ಉಪವಾಸ ಸಹ ಮಾಡುತ್ತಿದ್ದರು. ಅವರು ಹೇಳುತ್ತಿದ್ದರು: ಉಪವಾಸ ಮಾಡಲು ಶಕ್ತಿ ಇಲ್ಲದವರಿಗೋಸ್ಕರ ನಾನು ಉಪವಾಸ ಮಾಡುತ್ತಿದ್ದೇನೆ. ಅವರಿಗೆ ಅನ್ಯರ ಸೇವೆ ಮಾಡುವ ಎಷ್ಟು ಉತ್ಸಾಹವಿತ್ತೆಂದರೆ ಅವರು ಇರಾಖ್‌ನಲ್ಲಿ ವಾಸಿಸುತ್ತಾ ಇದ್ದಾಗ ಕೆಲವು ಸಾರಿ ಐವತ್ತು ಮೈಲು ಪ್ರಯಾಣ ಮಾಡಿ ಅಲ್ಲಿನ ಸಹಾಯಕರಾಗಿ ಯಾರೂ ಇಲ್ಲದ ಬಡ ಮಹಿಳೆಯರೊಂದಿಗೆ ಚಿಕಿತ್ಸೆಗೋಸ್ಕರ ಆಸ್ಪತ್ರೆಗೆ ಹೋಗುತ್ತಿದ್ದರು. ಕೆಲವು ಸಾರಿ ಆರ್ಥಿಕ ಸಹಾಯ ಸಹ ನೀಡುತ್ತಿದ್ದರು. ಸರ್ವಶಕ್ತನಾದ ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸಲಿ. ಅವರ ಪದವಿಗಳನ್ನು ಉನ್ನತ ಗೊಳಿಸಲಿ. ಅವರ ಪುತ್ರಿಯ ವಿಶ್ವಾಸ ಸಹ ಬಲಿಷ್ಠವಾಗಿರಿಸಲಿ. ಅಹ್ಮದಿಯರಾಗದ ಅವರ ಇತರ ಮಕ್ಕಳ ಹೃದಯಗಳನ್ನು ಅಲ್ಲಾಹನು ತೆರೆಯುವವನಾಗಲಿ. ಮಕ್ಕಳ ಬಗ್ಗೆ ಅವರು ಮಾಡಿದ ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕರಿಸಲ್ಪಡುವಂತಾಗಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِىَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ - عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَاءِ ذِى الْقُرْبٰى وَيَنْهٰى
عَنِ الْفَحْشَاءِ وَ الْمُنْكَرِ وَ الْبَغْىِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ -

***Friday Sermon delivered by Hadrath Khaleefatul Masih Al Khamis**(atba)*

*At, 'Ansarullah Ijthimah Gah', Kingsley, Bordon London, UK. On 13-09-2019*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim |***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon